ಕಟ್ಟಿಸಿಕೊಂಡು 26.12.2002ರಂದು ಉಪ ವಿಭಾಗಾಧಿಕಾರಿಗಳಿಂದ ಕಾರ್ಯಾದೇಶವನ್ನು ಕೊಟ್ಟಿರುತ್ತಾರೆ. ಇದಕ್ಕೆ ಬೇಕಾದ ಮಾಪಕವು ಅವರಲ್ಲಿ ಇಲ್ಲವಾದ್ದರಿಂದ, ಈ ಸ್ಥಾವರಕ್ಕೆ ಸಂಪರ್ಕ ಕೊಡುವುದರಲ್ಲಿ ವಿಳಂಬವಾಗಿದೆ. ಈಗಿನ ನಿಯಮಾವಳಿಯ ಪ್ರಕಾರ, ಗ್ರಾಹಕರು ಖರೀದಿಸಿ ತಂದಿರುವ ಮಾಪಕವನ್ನು ಅಳವಡಿಸಿ 25.2.2003ರಂದು ಸರ್ವೀಸ್ ಮಾಡಲಾಗಿದೆ (ಸಿ1 ಎಲ್‌ಜಿ - 23378)

ಆ) ಕಂಪೆನಿಯು ಮೀಟರ್ ಇಲ್ಲದ ಸಂದರ್ಭದಲ್ಲಿ ಹಣವನ್ನು ಪಡೆಯದೆ, ಗ್ರಾಹಕರೇ ಮೀಟರನ್ನು ಖರೀದಿಸುವ ಅವಕಾಶ ಜನವರಿಯಿಂದೀಚೆಗೆ ಜಾರಿಗೆ ಬಂದಿದ್ದು, ಈ ಗ್ರಾಹಕರು ಅರ್ಜಿ ಸಲ್ಲಿಸಿದಾಗ ಇದಕ್ಕೆ ಅವಕಾಶ ಇಲ್ಲದಿದ್ದರಿಂದ ಮಾಪಕ ಠೇವಣಿ ಕಟ್ಟಲು ಸೂಚಿಸಲಾಗಿತ್ತು. ಈಗಾಗಲೇ ಪಾವತಿಸಿರುವ ಈ ಮೊಬಲಗನ್ನು ಗ್ರಾಹಕರು ಸ್ಥಾವರದ ಮಾಸಿಕ ಬಿಲ್ಲುಗಳಿಗೆ ಸರಿದೂಗಿಸಲಾಗುವುದು.

ಇ) ಗ್ರಾಹಕರು ಅರ್ಜಿ ಸಲ್ಲಿಸಿದ್ದ ವೇಳೆಯಲ್ಲಿ ಇದ್ದ ನಿಯಮದ ರೀತ್ಯಾ ಉಪ ವಿಭಾಗಾಧಿಕಾರಿಯವರು ಕ್ರಮ ತೆಗೆದುಕೊಂಡಿರುವುದರಿಂದ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಸ್ತಾಪವಿರುವುದಿಲ್ಲ.

ಈ) ಸದಸ್ಯದಲ್ಲಿರುವ ವ್ಯವಸ್ಥೆಯ ಪ್ರಕಾರ, ಮೀಟರ್ ಠೇವಣಿ ಕಟ್ಟಿಸಿಕೊಳ್ಳದೆ, ಅರ್ಜಿದಾರರೇ ಮಾಪಕಗಳನ್ನು ಖರೀದಿಸುವಂತೆ ಸೂಚನೆ ಕೊಡಲು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ.

ಉ) ಗ್ರಾಹಕರು ಅರ್ಜಿ ಸಲ್ಲಿಸಿದ್ದ ವೇಳೆಯಲ್ಲಿ ಇದ್ದ ನಿಯಮದ ರೀತ್ಯಾ ಉಪವಿಭಾಗಾಧಿಕಾರಿಯವರು ಕ್ರಮ ತೆಗೆದುಕೊಂಡಿರುವುದರಿಂದ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಸ್ತಾಪವಿರುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಕೊರತೆ

781(816) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಕ್ಕೆ ಮಹಾರಾಷ್ಟ್ರ, ತಮಿಳುನಾಡು, ಆಂಧ್ರದಿಂದ ಯಾವ ಪ್ರಮಾಣದಲ್ಲಿ ವಿದ್ಯುತ್ ಖರೀದಿ ಮಾಡಿ ಲೋಡ್ ಶೆಡ್ಡಿಂಗ್ ಇಳಿಸಲಾಗಿದೆ; ಒಂದು ಯೂನಿಟ್‌ಗೆ ರಾಜ್ಯವು ಹೊರ ರಾಜ್ಯದವರಿಗೆ ನೀಡುತ್ತಿರುವ ದರ ಎಷ್ಟು;

ಆ) ಈಗ ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆಯ ಪ್ರಮಾಣವೇನು;

ಇ) ವಿದ್ಯುತ್ ದರವನ್ನು ಹೆಚ್ಚಿಗೆ ಮಾಡುವ ಯೋಜನೆಯು ಸರ್ಕಾರದ ಮುಂದಿದೆಯೇ?

ಈ) ಕಳ್ಳತನದಲ್ಲಿ ವಿದ್ಯುತ್ ಕದಿಯುತ್ತಿರುವ ಕಾರ್ಖಾನೆಯ ಮಾಲೀಕರ ವಿರುದ್ಧ ಕೈಗೊಳ್ಳುವ ಕ್ರಮವೇನು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಪ್ರಸ್ತುತ ರಾಜ್ಯವು ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರದಿಂದ ವಿದ್ಯುತ್ ಪಡೆಯುತ್ತಿಲ್ಲ. ಪೂರ್ವ ವಲಯದಿಂದ ವಿದ್ಯುತ್ತನ್ನು ಪಡೆಯುತ್ತಿವೆ. ಜನವರಿ 2003ರಲ್ಲಿ ದಿನವಹಿ ಸರಾಸರಿ 5.9 ದಶಲಕ್ಷ ಯೂನಿಟ್ಟುಗಳನ್ನು ಹಾಗೂ ಫೆಬ್ರವರಿ 2003ರಲ್ಲಿ ದಿನವಹಿ ಸರಾಸರಿ

5.5 ದಶಲಕ್ಷ ಯೂನಿಟ್ಸುಗಳನ್ನು ಪ್ರತಿ ಯೂನಿಟ್‌ಗೆ 180 ರಿಂದ 185 ಪೈಸೆಗಳ ದರದಲ್ಲಿ ಖರೀದಿಸಲಾಗಿದೆ.

ಎ.ಬಿ.ಟಿಯ ಅಳವಡಿಕೆಯ ನಂತರ, ರಾಜ್ಯವು ಕೇಂದ್ರ ವಿದ್ಯುತ್ ಜಾಲದಿಂದ ನಿಗದಿತ ಪ್ರಮಾಣಕ್ಕಿಂತ, ಹೆಚ್ಚು ವಿದ್ಯುತ್‌ನ್ನು ಪಡೆಯುತ್ತಿದೆ. ಈ ರೀತಿ ಹೆಚ್ಚಿಗೆ ಪಡೆದ ವಿದ್ಯುತ್‌ನ ದರವು ವಿದ್ಯುತ್ ಸರಬರಾಜಿನ ತರಂಗವನ್ನು ಅವಲಂಬಿಸಿದ್ದು, (49.02 ರಿಂದ 50.50 ರವರೆಗೆ) ಗರಿಷ್ಠ ದರವು 4.20 ರವರೆಗಿರುತ್ತದೆ.

ಅ) ರಾಜ್ಯದ ದೈನಂದಿನ ಅನಿರ್ಬಂಧಿತ ವಿದ್ಯುತ್ ಬೇಡಿಕೆಯು 109 ದಶಲಕ್ಷ ಯೂನಿಟ್ಸುಗಳು ಮತ್ತು ಈಗಿನ ದೈನಂದಿನ ಪೂರೈಕೆಯ ಪ್ರಮಾಣ 87.765 ದಶಲಕ್ಷ ಯೂನಿಟ್ಸುಗಳು. ಹೀಗಾಗಿ, ದಿನವಹಿ ಸುಮಾರು 21 ದಶಲಕ್ಷ ಯೂನಿಟ್ಸುಗಳ ವಿದ್ಯುತ್ ಕೊರತೆಯನ್ನು ಪ್ರಸ್ತುತ ರಾಜ್ಯವು ಎದುರಿಸುತ್ತಿದೆ.

ಇ) ವಿವಿಧ ವಿದ್ಯುತ್ ಸರಬರಾಜು ಕಂಪೆನಿಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಕಾಯಿದೆ ಪ್ರಕಾರ, ಪ್ರತಿ ವರ್ಷ ನವೆಂಬರ್ 30 ರೊಳಗೆ ಮುಂದಿನ ವರ್ಷದ ಆದಾಯ ವೆಚ್ಚ ಪಟ್ಟಿ ಮತ್ತು ದರ ಏರಿಕೆ ಪ್ರಸ್ತಾವವನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಸಲ್ಲಿಸಬೇಕು. ಅದರಂತೆ ಆಯೋಗಕ್ಕೆ ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿವೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಬಗ್ಗೆ ಅಂತಿಮ ತೀರ್ಮಾನವನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಕೈಗೊಳ್ಳಬೇಕಾಗಿರುತ್ತದೆ.

ಈ) ಸಂಜ್ಞೇಯ (ಕಾಗ್ನಿಸಿಬಲ್) ವಿದ್ಯುತ್ ಕಳವು ಪ್ರಕರಣಗಳಲ್ಲಿ ಭಾಗಿಗಳಾಗಿರುವ ಆರೋಪಿಗಳ ವಿರುದ್ಧ, ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿಕೊಳ್ಳುವ ಜೊತೆಗೆ ಹಿಂಬಾಕಿ ದಂದ ವಸೂಲಾತಿ ಕ್ರಮವನ್ನೂ ಕೈಗೊಳ್ಳಲಾಗುತ್ತದೆ. ಅಸಂಜ್ಞೇಯ (ನಾನ್‌ಕಾಗ್ನಿಸಿಬಲ್) ವಿದ್ಯುತ್ ಕಳವು ಪ್ರಕರಣಗಳಲ್ಲಿ ಭಾಗಿಗಳಾದವರಿಗೆ ಹಿಂಬಾಕಿ ದಂಡವನ್ನು ವಿಧಿಸಲಾಗುತ್ತದೆ.

ಕೊರಟಗೆರೆ ತಾಲ್ಲೂಕಿನಲ್ಲಿ ಸಿಎಲ್ -2. ಸಿವಿಲ್ 9ರ ಪರವಾನಿಗೆ

782(817) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕಿನಲ್ಲಿ ಸಿಎಲ್-2 ಸಿಎಲ್-9 ಪರವಾನಗಿ ಹೊಂದಿರುವ ಪರವಾನಗಿದಾರರ ಸಂಖ್ಯೆ ಎಷ್ಟು; ವಿವರವಾರು ಒದಗಿಸುವುದು.

ಆ) ಕಳೆದ ಮೂರು ವರ್ಷಗಳಿಂದ ಈ ತಾಲ್ಲೂಕಿನ ಅಬಕಾರಿ ಪರವಾನಗಿದಾರರಿಂದ ಬಂದಿರುವ ಆದಾಯವೆಷ್ಟು;

ಇ) ಈ ತಾಲ್ಲೂಕಿನಲ್ಲಿ ತೀವ್ರ ಗತಿಯಲ್ಲಿ ಸೆಕೆಂಡ್ಸ್‌ಗಳ ಹಾವಳಿಯು ಹೆಚ್ಚಾಗಿದ್ದು. ಅದನ್ನು ಮಾಡುತ್ತಿರುವ ಪರವಾನಗಿದಾರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದರೆ ಅಬಕಾರಿ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು?

ಶ್ರೀ ಎಂ.ಎಂ.ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ) ಸಿಎಲ್-2 - 9